ನೇರವಾಗಿ ನೋಡುತ್ತಿದ್ದವಳನ್ನು ಕಂಡು ಹೇಳಿದ, 'ಬಿಡು ಅದೆಲ್ಲ ಹಳೆಯ ಕಥೆ. ಅವತ್ತಿನ ಪರಿಸ್ಥಿತಿಯಲ್ಲಿ ನಾನು ಹಾಗೆ ಮಾತಾಡಿದ್ದು ತಪ್ಪಿರಬಹುದು. ಅದು ನನ್ನ ಅಹಂಕಾರವೂ ಇರಬಹುದು ಒಪ್ಪಿಕೊಳ್ಳುತ್ತೇನೆ. ಆದರೆ, ಈಗ ಅದನ್ನೆಲ್ಲ ಮಾತಾಡಿ ಏನೂ ಪ್ರಯೋಜನವಿಲ್ಲ'.

'ನಿನಗೆ ಏನೂ ಪ್ರಯೋಜನವಿರದೆ ಇರಬಹುದು, ಆದರೆ ನಿನ್ನಿಂದ ಅವಮಾನಕ್ಕೊಳಗಾದ ನಾನು, ನಿನ್ನಿಂದಲೆ ಈ ಪರಿಸ್ಥಿತಿಗೆ ದೂಡಲ್ಪಟ್ಟ ನಾನು ಅದನ್ನು ಮರೆಯುವುದು ಹೇಗೆ?... ಅಲ್ಲ, ಗಂಡಸು ಎನ್ನಿಸಿಕೊಂಡ ಕೂಡಲೆ ನಿನ್ನಂತಹವರಿಗೆ ಹೆಂಗಸರೆಂದರೆ ಯಾಕೆ ಅಸಡ್ಡೆ? ಸಹಕಲಾವಿದರು ಬಿಡು, ನಿನ್ನ ಜನಪ್ರಿಯತೆಗೆ ಒಂದಷ್ಟು ಕಾರಣರಾಗಿದ್ದ ನಟಿಯರಿಗಾದರೂ ಗೌರವ ಕೊಡಲಿಲ್ಲ ನೀನು. ಲಕ್ಷಾಂತರ ಸಂಭಾವನೆ ಪಡೆಯುತ್ತಿದ್ದ ಅವರನ್ನೆ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದ ನೀನು ನನ್ನಂತಹ ಜೂನಿಯರ್ ಕಲಾವಿದರಿಗೆ ಬೈಗುಳವನ್ನಲ್ಲದೆ ಬೇರೇನು ಕೊಡುತ್ತಿದ್ದೆ? ನನಗೆ ಏನೆಂದು ಬೈದಿದ್ದೆ ನೆನಪಿದೆಯ? ನಿನಗೆ ನಟನೆ ಯಾಕೆ ಎಲ್ಲಾದರೂ ಪಿಕಪ್ ಆಗು, ಅದಕ್ಕೆ ಲಾಯಕ್ಕು ನೀನು ಅಂತ ಬೈದಿದ್ದೆ ಅಲ್ಲವ? ಮಹಿಳೆಯರನ್ನು ಗೌರವಿಸುವ ಈ ನಾಡಿನಲ್ಲಿ ಹಾಗೆ ಅಸಭ್ಯವಾಗಿ ಮಾತನಾಡಬೇಕಾದರೆ ನಿನಗಿದ್ದ ಅಹಂಕಾರ ಎಷ್ಟಿರಬಹುದು?... ಹೌದು ನಾನು ಗತಿ ಇಲ್ಲದೆ ನೀನು ಬಯಸಿದಂತೆಯೆ ಆಗಿದ್ದೇನೆ ಅಂತಿಟ್ಟುಕೋ. ಆದರೂ ಸಾಕಷ್ಟು ದುಡಿಯುತ್ತೇನೆ. ಸ್ವಂತ ಮನೆ ಕಟ್ಟಿಕೊಂಡಿದ್ದೇನೆ. ಅಲ್ಲದೆ ನನ್ನಂತೆ ಶೋಷಿತರಾಗಿ, ನಿನ್ನಂತಹವರಿಂದ ಅನಿವಾರ್ಯವಾಗಿ ಈ ವೃತ್ತಿಗಿಳಿದವರ ಪರವಾಗಿ ಹೋರಾಡುತ್ತೇನೆ. ನಮ್ಮ ಹಿಂದೆ ಸುತ್ತಿಕೊಂಡಿರೋ ಗಂಡಸರು ನನಗೆ ಗೌರವ ಕೊಡೋದಿಲ್ಲ, ಅದು ಗಂಡಸರ ಅಹಂಕಾರ. ಆದರೆ, 'ನನ್ನವರು' ನನ್ನನ್ನು ಗೌರವಿಸ್ತಾರೆ. ಇವತ್ತು ನೀನು ಹೇಗಾಗಿದ್ದೀಯ? ನಿನಗೆ ಯಾವ ಬೆಲೆ ಇದೆ? ಕನಿಷ್ಠ ಈ ಹೋಟೆಲ್ ಸಪ್ಲೈಯರ್ ಕೂಡಾ ನಿನ್ನನ್ನು ಗುರುತಿಸಲಿಲ್ಲ. ನನಗೆ ಹಂಗಿಸಿದೋನು ನೀನು, ಇವತ್ತು ಬೀದಿ ಭಿಕಾರಿ ಆಗಿಬಿಟ್ಟೆ...' ಎನ್ನುತ್ತಾ ಚಪ್ಪಾಳೆ ತಟ್ಟಿ ನಕ್ಕುಬಿಟ್ಟಳು.

ಇನ್ನು ಅವಳ ಎದುರು ಕುಳಿತು ಮತ್ತಷ್ಟು ಅವಮಾನ ಮಾಡಿಸಿಕೊಳ್ಳುವ ಮನಸ್ಸಿಲ್ಲದೆ ಅವನು ಬಿಲ್ಲು ಕೊಟ್ಟು ಇವಳಿಂದ ತಪ್ಪಿಸಿಕೊಳ್ಳೋಣ ಎಂದು ಎದುರಿದ್ದ ಬಿಲ್ಲನ್ನು ಕೈಗೆತ್ತಿಕೊಂಡ.

'ಬೀದಿ ಭಿಕಾರಿಯಾಗಿರೋ ನಿನಗೆ ಆ ಬಿಲ್ಲು ಕೊಡಲೂ ಯೋಗ್ಯತೆ ಇಲ್ಲ ಅಂತ ನನಗೆ ಗೊತ್ತು. ಇಲ್ಲಿ ಕೊಡು ಅದನ್ನು' ಎನ್ನುತ್ತಾ ಅವನ ಕೈನಿಂದ ಕಸಿದುಕೊಂಡಳು.

ಅವಳ ತಿರಸ್ಕಾರ ತುಂಬಿದ್ದ ಆ ಮಾತು ಅವನ ಕೆನ್ನೆಗೆ ಬಿದ್ದ ಏಟಿನಂತಿತ್ತು.

ಅವನ ಒಂದು ಹಳೆಯ ಮಾತನ್ನು ಮನಸ್ಸಿನಲ್ಲೆ ಮರೆಯದಂತೆ ಕಾಪಿಟ್ಟುಕೊಂಡಿದ್ದ ಅವಳು ಅವನೆಂದಾದರೂ ಒಂಟಿಯಾಗಿ ಸಿಕ್ಕಲ್ಲಿ ಈ ರೀತಿ ಅವಮಾನ ಮಾಡಲೇಬೇಕೆಂದು ಮೊದಲೆ ನಿರ್ಧರಿಸಿಕೊಂಡಿದ್ದಳೇನೋ ಎನ್ನುವಂತಿತ್ತು.

**ಕೇಶವ ಕುಡ್ಲ**

2020ರ 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿರುವ ಲೇಖಕರು 85 ಕತೆಗಳನ್ನು, ಸುಮಾರು 250 ಲೇಖನಗಳನ್ನೂ ಬರೆದಿದ್ದಾರೆ. 'ಅಪ್ಪಾರಾಯಣ ಪಾದಯಾತ್ರೆ', 'ಹುತ್ತವ ಕಟ್ಟಿ ಅಡಗಿತ್ತು ನೋವು', 'ಆಯನ' ಮೊದಲಾಗಿ ಅವರ 15 ಪುಸ್ತಕಗಳು ಪ್ರಕಟವಾಗಿವೆ. ಬರಹದ ಜೊತೆಗೆ ಛಾಯಾಗ್ರಹಣ ಮತ್ತು ಚಾರಣ ಜೀವನೋಲ್ಲಾಸಕ್ಕೆ ಕಂಡುಕೊಂಡ ಮಾರ್ಗಗಳು. ವಿಮಾ ಕಂಪನಿಯ ಉದ್ಯೋಗದಿಂದ ನಿವೃತ್ತರು. ಪ್ರಸ್ತುತ ಮಂಗಳೂರಿನಲ್ಲಿ ನೆಲೆಸಿದ್ದಾರೆ.